ಮಂಗಳೂರು ವಿಶ್ವವಿದ್ಯಾನಿಲಯ
MANGALORE UNIVERSITY

Office : (0824) 2287347/2287380
Fax : (0824) 2287367
E-mail : vc@mangaloreuniversity.ac.in
vcmangaloreuniversity19@gmail.com
Website : www.mangaloreuniversity.ac.in

ಕುಲಪತಿಯವರ ಕಾರ್ಯಾಲಯ
ಮಂಗಳಗಂಗೋತ್ರಿ – 574 199, ಕರ್ನಾಟಕ

Vice Chancellor's Secretariat
Mangalagangotri - 574 199
Karnataka, India

**Prof. Jayaraj Amin**
**Acting Vice Chancellor**

ಸಂ.:ಮಂವಿ:ಕುಪ:2023-24

02.09.2023

ರಿಗೆ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-2)
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001.

ಮಾನ್ಯರೇ,

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಗಣೇಶೋತ್ಸವ ಕಾರ್ಯಕ್ರಮವನ್ನು ಆಚರಿಸುವ ಬಗ್ಗೆ.

*******

ಸುಮಾರು 43 ವರ್ಷಗಳನ್ನು ಪೂರೈಸಿ, 44ನೇ ವರ್ಷಕ್ಕೆ ಪಾದಾರ್ಪಣೆಗೈಯುತ್ತಿರುವ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ 40 ವರ್ಷಕ್ಕಿಂತಲೂ ಮೀರಿ ಗಣೇಶೋತ್ಸವ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ನಿಲಯಪಾಲಕರ ಉಸ್ತುವಾರಿಯಲ್ಲಿ ವಿದ್ಯಾರ್ಥಿಗಳು ಜೊತೆಗೂಡಿ ಪುರುಷರ ವಸತಿನಿಲಯದಲ್ಲಿ ಯಾವುದೇ ಗೊಂದಲ/ಅಡೆತಡೆಗಳಿಲ್ಲದೆ ವ್ಯವಸ್ಥಿತವಾಗಿ ಆಚರಿಸಿಕೊಂಡು ಬಂದಿರುತ್ತಾರೆ. ಈ ಕಾರ್ಯಕ್ರಮಕ್ಕೆ ಮಹಿಳೆಯರಿಗೆ, ವಿಶ್ವವಿದ್ಯಾನಿಲಯದ ಸಿಬ್ಬಂದಿ ಮತ್ತು ಅವರ ಕುಟುಂಬ ಹಾಗೂ ಸ್ಥಳೀಯರಿಗೂ ಪ್ರವೇಶವಿರುತ್ತದೆ.

2017, 2018 ಹಾಗೂ 2019 (ಮೂರು ವರ್ಷಗಳು)ರಲ್ಲಿ ಗಣೇಶೋತ್ಸವ ಕಾರ್ಯಕ್ರಮವನ್ನು ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ತಿನ ಕೆಲವೊಂದು ವಿದ್ಯಾರ್ಥಿಗಳು ವಿಜ್ಞಾನ ಸಂಕೀರ್ಣ ಕಟ್ಟಡದಲ್ಲಿ ಆಚರಿಸಿರುತ್ತಾರೆ. ಅಂತೆಯೇ, ಈ ಹಿಂದಿನಂತೆ ನಿಲಯಪಾಲಕರ ಉಸ್ತುವಾರಿಯಲ್ಲಿ ಪುರುಷರ ವಸತಿನಿಲಯದಲ್ಲಿಯೂ ಕೂಡಾ ಆಚರಿಸಲಾಗಿರುತ್ತದೆ. 2020ರಲ್ಲಿ ಕೋವಿಡ್-19 ರ ಹಿನ್ನಲೆಯಲ್ಲಿ ಯಾವುದೇ ಆಚರಣೆಗಳನ್ನು ವಿಶ್ವವಿದ್ಯಾನಿಲಯದಲ್ಲಿ ನಡೆಸಿರುವುದಿಲ್ಲ.

ವಿಶ್ವವಿದ್ಯಾನಿಲಯವು 2021ರಲ್ಲಿ ಕೋವಿಡ್-19 ರ ಪ್ರಯುಕ್ತ ಗಣೇಶೋತ್ಸವ ಕಾರ್ಯಕ್ರಮವನ್ನು ಒಂದೇ ಕಡೆ ಆಚರಿಸಲು ನಿರ್ಧರಿಸಿ, ಸದರಿ ಕಾರ್ಯಕ್ರಮವನ್ನು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶನಾಲಯ ಇವರ

ಉಸ್ತುವಾರಿಯಲ್ಲಿ ವಿಶ್ವವಿದ್ಯಾನಿಲಯದ ಮಂಗಳ ಸಭಾಂಗಣದಲ್ಲಿ ನಡೆಸಲು ಅನುಮತಿ ನೀಡಲಾಗಿರುತ್ತದೆ ಹಾಗೂ ಸದರಿ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯದ ವತಿಯಿಂದ ರೂ.1,52,000/-ನ್ನು ವ್ಯಯಿಸಲಾಗಿರುತ್ತದೆ. 2022ನೇ ಸಾಲಿನಲ್ಲಿ ಗಣೇಶೋತ್ಸವ ಕಾರ್ಯಕ್ರಮವನ್ನು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮ.ಪಾಲನಾ ನಿರ್ದೇಶನಾಲಯ ಇವರ ಮುಖಾಂತರ ಮಂಗಳ ಸಭಾಂಗಣದಲ್ಲಿ ಏರ್ಪಡಿಸಿ, ವಿಶ್ವವಿದ್ಯಾನಿಲಯದ ವತಿಯಿಂದ ರೂ.1,97,390.50ನ್ನು ವ್ಯಯಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ 20.12.2022 ರಂದು ನಡೆದ ಸಿಂಡಿಕೇಟು ಸಭೆಯಲ್ಲಿ ಗಣೇಶೋತ್ಸವ ಕಾರ್ಯಕ್ರಮವನ್ನು ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದವರ ಮೇಲುಸ್ತುವಾರಿಯೊಂದಿಗೆ ಆಚರಿಸಲು ನಿರ್ಣಯಿಸಲಾಗಿರುತ್ತದೆ **(ಪ್ರತಿ ಲಗತ್ತಿಸಿದೆ - ಅಡಕ - 1).**

ಆದರೆ, 2021ರಲ್ಲಿ ಗಣೇಶೋತ್ಸವ ಆಚರಣೆಗೆ ವಿಶ್ವವಿದ್ಯಾನಿಲಯದ ವತಿಯಿಂದ ನೀಡಿರುವ ರೂ.1,52,901/- ವೆಚ್ಚಕ್ಕೆ ಆಡಿಟ್ ಆಕ್ಷೇಪಣೆಯಾಗಿದ್ದು, ಗಣೇಶೋತ್ಸವ ಆಚರಣೆಗೆ ಕಛೇರಿ ಕೈಪಿಡಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮದ ಯಾವ ನಿಯಮಗಳನ್ವಯ ಗಣೇಶೋತ್ಸವ ಆಚರಣೆಗೆ ಈ ವೆಚ್ಚವನ್ನು ಭರಿಸಲಾಗಿದೆ ಎಂಬ ಬಗ್ಗೆ ವಿವರಣೆ ನೀಡುವಂತೆ ದಿನಾಂಕ 30.06.2023ರ ವಿಚಾರಣಾ ಪತ್ರದಲ್ಲಿ ತಿಳಿಸಿರುತ್ತಾರೆ **(ಪ್ರತಿ ಲಗತ್ತಿಸಿದೆ – ಅಡಕ -2).**

ಪ್ರಸ್ತುತ ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ಇವರು ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ತಿನ ಬೇಡಿಕೆಗಳಿಗೆ ಸಂಬಂಧಿಸಿ ದಿನಾಂಕ 19.09.2023ರಂದು ಮಂಗಳ ಸಭಾಂಗಣದಲ್ಲಿ ಗಣೇಶೋತ್ಸವ ನಡೆಸಲು ಅನುಮತಿ ಹಾಗೂ ಸದರಿ ಕಾರ್ಯಕ್ರಮದ ಖರ್ಚು ವೆಚ್ಚ ಭರಿಸಲು ರೂ.2.00 ಲಕ್ಷ ಮುಂಗಡ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಗಣೇಶೋತ್ಸವ ಕಾರ್ಯಕ್ರಮವನ್ನು ಮಂಗಳಾ ಸಭಾಂಗಣದಲ್ಲಿ ನೆರವೇರಿಸಬೇಕೆಂದು ಅನಾಮದೇಯ ಪತ್ರ (ವಿದ್ಯಾರ್ಥಿಗಳು ಎಂದು ಹೆಸರಿಸಿದ)ದ ಮೂಲಕ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿರುತ್ತಾರೆ. **(ಪ್ರತಿ ಲಗತ್ತಿಸಿದೆ - ಅಡಕ 3).** ಆದರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷರು/ಸದಸ್ಯರು ಈ ಬಗ್ಗೆ ಮುಖತ:/ಪತ್ರ ಮುಖೇನ ಯಾವುದೇ ಮನವಿ/ಬೇಡಿಕೆಯನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿರುವುದಿಲ್ಲ. ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ಪರೀಕ್ಷೆಗಳು ಮುಗಿದು ರಜೆ ನೀಡಲಾಗಿರುವುದರಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಮಂಗಳಾ ಸಭಾಂಗಣವು ಹವಾನಿಯಂತ್ರಿತ ಸಭಾಂಗಣವಾಗಿದ್ದು, 600 ಕ್ಕಿಂತಲೂ ಹೆಚ್ಚು ಆಸನದ ವ್ಯವಸ್ಥೆ ಇದ್ದು, ಈ ಸಮಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ ಸದರಿ ಕಾರ್ಯಕ್ರಮವನ್ನು ಮಂಗಳ ಸಭಾಂಗಣದಲ್ಲಿ ಏರ್ಪಡಿಸುವುದು ಸೂಕ್ತವಾಗಿರುವುದಿಲ್ಲ. ಅಷ್ಟು ಮಾತ್ರವಲ್ಲದೆ, ಈ ಕಾರ್ಯಕ್ರಮದ ಜವಾಬ್ದಾರಿ ಯಾರಿಗೆ

ನೀಡಬೇಕೆಂದು ಕೂಡ ಸ್ಪಷ್ಟವಾಗಿಲ್ಲ, ಕಾರ್ಯಕ್ರಮ ಏರ್ಪಡಿಸಬೇಕೆಂದು ಹೇಳುವವರು ಇದನ್ನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿಯವರ ನೇತೃತ್ವದಲ್ಲಿ ಹಿಂದೆ ನಡೆಸಿದ ಹಾಗೆ ನಡೆಸಬೇಕೆಂದು ಬಯಸಿರುತ್ತಾರೆ. ಅಂದರೆ ಇದೊಂದು ವಿಶ್ವವಿದ್ಯಾನಿಲಯದ ಅಧಿಕಾರಿಯವರ ಮೂಲಕ ಅಧಿಕೃತವಾಗಿ ನಡೆಯಬೇಕೆಂದು ಇಚ್ಛಿಸಿರುತ್ತಾರೆ. ಅಧಿಕೃತವಾಗಿ ಈ ರೀತಿಯ ಕಾರ್ಯಕ್ರಮವನ್ನು ಕರ್ನಾಟಕದ ಯಾವುದೇ ಸರಕಾರಿ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿರುವುದು ಕಂಡುಬರುವುದಿಲ್ಲ. ಈ ಹಿಂದೆ ಈ ಕಾರ್ಯಕ್ರಮಕ್ಕೆ ವಿಶ್ವವಿದ್ಯಾನಿಲಯವೇ ಹಣ ನೀಡಿ ಕಾರ್ಯಕ್ರಮ ಪ್ರಾಯೋಜಿಸಿದ ಬಗ್ಗೆ ಅಡಿಟ್ ಆಕ್ಷೇಪಣೆ (Audit Objection) ಕೂಡ ಬಂದಿದ್ದು, ಪ್ರಸ್ತುತ ವಿಶ್ವವಿದ್ಯಾನಿಲಯದ ಹಣಕಾಸಿನ ಸ್ಥಿತಿಗತಿಯ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮವನ್ನು ಮಂಗಳ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯವೇ ಏರ್ಪಡಿಸಲು ಕಷ್ಟಸಾಧ್ಯವಾಗಿರುತ್ತದೆ. ಕಾರ್ಯಕ್ರಮ ಆಚರಣೆ ಉಸ್ತುವಾರಿಯನ್ನು ವಿದ್ಯಾರ್ಥಿಗಳಿಗೆ ಬಿಟ್ಟರೆ, ಸಾರ್ವಜನಿಕ ಹಣ ಸಂಗ್ರಹದ ಮೂಲಕ ಬೇರೆ ಸಮಸ್ಯೆ ಉಂಟಾಗುವ ಸಾಧ್ಯತೆ ಕೂಡ ಇದೆ. ಮಂಗಳ ಸಭಾಂಗಣ 600ಕ್ಕಿಂತಲೂ ಹೆಚ್ಚು ಆಸನ ವ್ಯವಸ್ಥೆ ಹೊಂದಿದ್ದು ರಜೆಯ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ವಿರಳವಾಗಿರುತ್ತದೆ. ಆದರೆ ಜನ ಸೇರಿಸಲು ಹೊರಗಿನ ವ್ಯಕ್ತಿಗಳನ್ನು ಆಹ್ವಾನಿಸಿ, ಅವರ ಕೈಗೆ ಕಾರ್ಯಕ್ರಮದ ಜವಾಬ್ದಾರಿ ನೀಡಿದಲ್ಲಿ ಬೇರೆ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ವಿದ್ಯಾರ್ಥಿ ನಿಲಯದಲ್ಲಿ ಬಹಳಷ್ಟು ವರ್ಷಗಳಿಂದ ನಡೆದುಕೊಂಡು ಬಂದಿರುವ ಆಚರಣೆ ಪ್ರಕಾರ ಈ ವರ್ಷವೂ ಗಣೇಶೋತ್ಸವದ ಆಚರಣೆಯನ್ನು ಪುರುಷರ ವಸತಿನಿಲಯದಲ್ಲೇ ಏರ್ಪಡಿಸುವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಸತಿನಿಲಯದಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಸಾಂಸ್ಕೃತಿಕ ಶುಲ್ಕದ ಉಪಯೋಗ ಮಾಡಿ ನಿಲಯಪಾಲಕರ ನೇತೃತ್ವದಲ್ಲಿ ಆಚರಣೆಯನ್ನು ಮಾಡುವ ಪ್ರಸ್ತಾವನೆಗೆ ಮುಖ್ಯವಾಗಿ ರಾಜಕೀಯ ಕ್ಷೇತ್ರದ ಧುರೀಣರಿಂದ ವಿರೋಧ ವ್ಯಕ್ತವಾಗುತ್ತಿದೆ ಮತ್ತು ಕಾರ್ಯಕ್ರಮವನ್ನು ಹಿಂದಿನ ಸಿಂಡಿಕೇಟ್ ನಿರ್ಣಯ (ದಿನಾಂಕ 20.12.2022)ದಂತೆ ಮಂಗಳ ಸಭಾಂಗಣದಲ್ಲೇ ನಡೆಸಬೇಕೆಂದು ಹಿಂದಿನ ಸಿಂಡಿಕೇಟ್ ಸದಸ್ಯರಾದ ಶ್ರೀ ರಮೇಶ್ ಕೆ. ಇವರು ತಮ್ಮ ಪತ್ರದಲ್ಲಿ ತಿಳಿಸಿದ್ದು, ಮಂಗಳ ಸಭಾಂಗಣದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ನಿದೇಶನಾಲಯದ ಮೇಲುಸ್ತುವಾರಿಯಲ್ಲಿಯೇ ನಡೆಸಬೇಕೆಂದು ಒತ್ತಾಯ ಹೇರಲಾಗುತ್ತಿದೆ. **(ಪ್ರತಿ ಲಗತ್ತಿಸಿದೆ – ಅಡಕ -4).**

ಈ ಮಧ್ಯೆ ನಿರ್ದೇಶಕರು, ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶನಾಲಯ ಗಣೇಶೋತ್ಸವ ಕಾರ್ಯಕ್ರಮವನ್ನು ಆಚರಿಸುವ ಬಗ್ಗೆ ಹಲವಾರು ಕಡೆಗಳಿಂದ ಒತ್ತಡ ಬರುತ್ತಿರುವುದರಿಂದ ಮಾನಸಿಕವಾಗಿ ನೊಂದು ಹುದ್ದೆಯ ಪ್ರಭಾರದಿಂದ ಬಿಡುಗಡೆಗೊಳಿಸಬೇಕಾಗಿ ವಿಶ್ವವಿದ್ಯಾನಿಲಯಕ್ಕೆ ಮನವಿ ಮಾಡಿಕೊಂಡಿರುತ್ತಾರೆ **(ಪ್ರತಿ ಲಗತ್ತಿಸಿದೆ – ಅಡಕ - 5).**

ಮತ್ತೊಂದೆಡೆ, ಮಂಗಳೂರು ವಿಶ್ವವಿದ್ಯಾನಿಲಯ ಪುರುಷರ ವಸತಿನಿಲಯದ ನಿಲಯಪಾಲಕರು ವಿದ್ಯಾರ್ಥಿಗಳ ಅಪೇಕ್ಷೆಯ ಮೇರೆಗೆ ಈ ಹಿಂದಿನ ವರ್ಷಗಳಲ್ಲಿ ಆಚರಿಸುತ್ತಿದ್ದ ಹಾಗೆ ಈ ಬಾರಿಯ ಗಣೇಶೋತ್ಸವವನ್ನು ವಿಶ್ವವಿದ್ಯಾನಿಲಯಕ್ಕೆ

ಯಾವುದೇ ಆರ್ಥಿಕ ಹೊರೆಯಿಲ್ಲದೆ ಪುರುಷರ ವಸತಿನಿಲಯದಲ್ಲಿಯೇ ಆಚರಿಸಲು ಅವಕಾಶ ಮಾಡಿಕೊಡಬೇಕಾಗಿ ಕೋರಿ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿರುತ್ತಾರೆ (ಪ್ರತಿ ಲಗತ್ತಿಸಿದೆ – ಅಡಕ - 6 ).

ಮುಂದುವರೆದು, ಈ ಬೆಳವಣಿಗೆಗಳ ಬಗ್ಗೆ ನನಗೂ ಕರೆ ಬರುತ್ತಿದ್ದು, ದಿನಾಂಕ 01.09.20203ರಂದು ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕರಾದ ಶ್ರೀ ಡಿ. ವೇದವ್ಯಾಸ ಕಾಮತ್, ಭಾರತೀಯ ಜನತಾ ಪಾರ್ಟಿಯ ಮುಖಂಡರಾದ ಶ್ರೀ ಸಂತೋಷ್ ಕುಮಾರ್ ಬೋಳಿಯಾರ್, ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಸದಸ್ಯರಾದ ಶ್ರೀ ರಮೇಶ್ ಕೆ. ಹಾಗೂ ಇತರ ಸುಮಾರು 8 ಮಂದಿ ಜೊತೆಗೂಡಿ ನನ್ನ ಕಚೇರಿಗೆ ಆಗಮಿಸಿ ಈ ಬಾರಿಯ ಗಣೇಶೋತ್ಸವ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ವತಿಯಿಂದಲೇ ಆರ್ಥಿಕ ವೆಚ್ಚವನ್ನು ಭರಿಸಿಕೊಂಡು ಮಂಗಳ ಸಭಾಂಗಣದಲ್ಲಿ ನಡೆಸಬೇಕೆಂದು ಆಗ್ರಹಿಸಿ, ಈ ಬಗ್ಗೆ ಸುಮಾರು 2 ಗಂಟೆಗಳ ಕಾಲ ನನ್ನ ಮೇಲೆ ಒತ್ತಡ ತಂದಿರುತ್ತಾರೆ ಮತ್ತು ಕೂಡಲೇ ಒಪ್ಪಿಗೆ ನೀಡದಿದ್ದಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ಹಾಗೂ ಹೋರಾಟ ನಡೆಸುವುದಾಗಿ ಹಾಗೂ ಈ ಬಗ್ಗೆ ಮಾಧ್ಯಮ ಗೋಷ್ಠಿ ನಡೆಸುವುದಾಗಿ ಬೆದರಿಕೆ ಹಾಕಿರುತ್ತಾರೆ ಮತ್ತು ವೈಯಕ್ತಿಕವಾಗಿ ಆಕ್ರಮಣದ ನಿಲುವನ್ನು ಪ್ರದರ್ಶಿಸಿರುತ್ತಾರೆ (ಈ ದಿನ 02.09.2023 ರಂದು ಕೆಲವೊಂದು ಮಾಧ್ಯಮಗಳಲ್ಲಿ ಗಣೇಶೋತ್ಸವ ಆಚರಣೆ ಬಗ್ಗೆ ಸುದ್ದಿ ಬಿತ್ತರವೂ ಆಗಿರುತ್ತದೆ ಹಾಗೂ ಮುಂದಿನ ದಿನಗಳಲ್ಲಿ ವ್ಯಾಪಕವಾಗಿ ಪ್ರಚಾರವಾಗುವ ಸಾಧ್ಯತೆಯೂ ಇರುತ್ತದೆ) (ಪ್ರತಿ ಲಗತ್ತಿಸಿದೆ – ಅಡಕ - 7 ).

ಆದುದರಿಂದ ಪ್ರಸ್ತುತ ಉದ್ವಿಗ್ನ ಮತ್ತು ಸೂಕ್ಷ್ಮ ಪರಿಸ್ಥಿತಿಯನ್ನು ಗಮನಿಸಿ ನಮಗೆ ಸೂಕ್ತವಾದ ಮಾರ್ಗದರ್ಶನವನ್ನು ನೀಡಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತಿದ್ದೇನೆ. ಮುಖ್ಯವಾಗಿ, **ಘರ್ಷಣೆ ತಡೆಯಲು ಈ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಮೂಲಕ ಮಂಗಳ ಸಭಾಂಗಣದಲ್ಲೇ (ಹಿಂದಿನ ಸಿಂಡಿಕೇಟ್ ನಿರ್ಧಾರದ ಪ್ರಕಾರ) ನಡೆಸಲು ಅನುಮತಿ ನೀಡುವುದೇ ಅಥವಾ ಬೇಡವೇ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ನಿರ್ದೇಶನ ನೀಡುವುದು ಮತ್ತು ಆಚರಣೆಗೆ ಆರ್ಥಿಕ ಬೆಂಬಲದ ಬಗ್ಗೆ ಕೂಡ ಸೂಚನೆ ನೀಡಬೇಕೆಂದು ಕೋರಿಕೊಳ್ಳುತ್ತಿದ್ದೇನೆ. ಪರಿಸ್ಥಿತಿಯ ಗಂಭೀರತೆಯನ್ನು ಅರ್ಥೈಸಿ ತಮ್ಮ ಉತ್ತರವನ್ನು ಕೂಡಲೇ ಲಿಖಿತ ರೂಪದಲ್ಲಿ ನೀಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ.**

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಜಯರಾಜ್ ಅಮೀನ್)

**Vice Chancellor**
**Mangalore University**
**MANGALAGANGOTHRI - 574 199**